**58 ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ**
**ಸಿಸಿಹೆಚ್-59**
**ಎಸ್.ಸಿ.ನಂ. 1319/2024**

ಪಿ.ಡಬ್ಲ್ಯೂ. 15
ಸಿ.ಡಬ್ಲ್ಯೂ.58
ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕಃ 22.06.2026

| | |
|---|---|
| **ಸಾಕ್ಷಿಯ ಹೆಸರು** | ಷಡಾಕ್ಷರಯ್ಯ .ಎಸ್ |
| **ತಂದೆಯ ಹೆಸರು** | ಲೇಃ ಎಂ.ಶಿವಲಿಂಗಯ್ಯ |
| **ವಯಸ್ಸು** | 62 ವರ್ಷ |
| **ವೃತ್ತಿ** | ನಿವೃತ್ತ ಪ್ರಾಂಶುಪಾಲರು |
| **ವಾಸ ಸ್ಥಳ** | ಚಿತ್ರದುರ್ಗ. |

**ಮುಖ್ಯ ವಿಚಾರಣೆಃ ಮಾನ್ಯ ಪ್ರಾಜ್ಞ ಪಿಪಿ ರವರಿಂದಃ**

ದಿಃ 05.07.2024 ರಂದು ಕಾಮಾಕ್ಷಿಪಾಳ್ಯ ಪೊಲೀಸರು ಅಂದರೆ, ಪಿಎಸ್‌ಐ-ವಿನಾಯಕ್ ಮತ್ತು ಅವರ ತಂಡದವರು ಬಂದು ಒಂದು ಸಿಮ್‌ನ್ನು ವಶಪಡಿಸಿಕೊಳ್ಳಬೇಕಾಗಿರುವುದರಿಂದ, ನೀವು ಪಂಚರಾಗಿ ಸಹಕರಿಸಬೇಕು ಎಂದು ಕೋರಿಕೊಂಡಿದ್ದರು. ಆ ಸಮಯದಲ್ಲಿ ನನ್ನೊಂದಿಗೆ ಪರಮಾನಂದಯ್ಯ-ಚಾ.ಸಾ.59 ಸಹ ಇದ್ದರು. ನಂತರ ನನಗೆ ನೋಟೀಸ್ ಜಾರಿ ಮಾಡಿ ಪಂಚರಾಗಿ ಬರಬೇಕು ಎಂದು ಕೋರಿಕೊಂಡಿದ್ದರು.

2. ನೋಟೀಸ್ ಪಡೆದನಂತರ, ನಾನು ಅವರೊಂದಿಗೆ ಹೋಗಿ ಪಂಚರಾಗಿ ಸಹಕರಿಸಿರುತ್ತೇನೆ. ನಾನು ಅವರೊಂದಿಗೆ ಚಿತ್ರದುರ್ಗದ ತುರುವುನೂರು ರಸ್ತೆಯಲ್ಲಿ ಇರುವ ವೆಂಕಟೇಶ್ವರ ಬಡಾವಣೆಯಲ್ಲಿ ಇರುವ ಸದರ್ಮ ಸಧನ ಎಂಬ ಮನೆ ಅಂದರೆ ಮೃತ ರೇಣುಕಾಸ್ವಾಮಿಯವರ ಮನೆಗೆ ಹೋಗಿರುತ್ತೇವೆ. ಪೊಲೀಸರು ನಮಗೆ ರೇಣುಕಾಸ್ವಾಮಿಯವರ ಒಂದು ಸಿಮ್ ಅನ್ನು ಅವರ ಮನೆಯವರಿಂದ

ವಶಪಡಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದ್ದರು. ಪೊಲೀಸರು ನಮಗೆ ಅವರು ಏರಟೆಲ್ ಕಂಪನಿಯ ರೇಣುಕಾಸ್ವಾಮಿಯವರ ಸಿಮ್ ಅನ್ನು ಅವರು ಮೊದಲು ಪಡೆದುಕೊಂಡಿದ್ದು, ಆದರೆ ಜಿಯೋ ಕಂಪನಿಯ ಸಿಮ್ ಅನ್ನು ಕಂಪನಿಯವರು ನೀಡದೇ ಇರುವ ಕಾರಣ ಹಾಗೂ ಅವರ ಮನೆಯವರೇ ಕೇಳಿ ಪಡೆದುಕೊಳ್ಳಬೇಕು ಎಂದು ಕಂಪನಿಯವರು ತಮಗೆ ತಿಳಿಸಿದ್ದರು ಎಂದು ನಮಗೆ ಹೇಳಿರುತ್ತಾರೆ.

3. ನಂತರ ನಾವು ಮೃತ ರೇಣುಕಾಸ್ವಾಮಿಯವರ ಮನೆಗೆ ಹೋದಾಗ, ಮೃತರ ಹೆಂಡತಿಯಾದ ಸಹನರವರ (ಚಾ.ಸಾ.9) ಕಡೆಯಿಂದ ಜಿಯೋ ಕಂಪನಿಯ ಸಿಮ್ ಅನ್ನು ಪಿಎಸ್‌ಐ-ವಿನಯ್‌ರವರು ಪಡೆದುಕೊಂಡಿರುತ್ತಾರೆ. ಸದರಿ ಸಿಮ್‌ನಲ್ಲಿ ಇರುವ ವಾಟ್ಸಅಪ್ ಮತ್ತು ಇನ್ಸ್ಟಗ್ರಾಮನ್ನು ಪರಿಶೀಲನೆ ಮಾಡಲು ಅಂದರೆ ಮುಂದಿನ ತನಿಖೆಗಾಗಿ ಸದರಿ ಸಿಮ್‌ನ್ನು ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡಿದ್ದರು. ಸದರಿ ಸಿಮ್‌ನ್ನು ನಾನು ನೋಡಿರುತ್ತೇನೆ. ಸದರಿ ಸಿಮ್‌ನ ಒಂದು ಕಡೆ ಜಿಯೋ ಎಂದು ಬರೆದಿದ್ದು, ಇನ್ನೊಂದು ಬದಿಯಲ್ಲಿ ಹಲವಾರು ಸಂಖ್ಯೆಗಳು ಬರೆದಿದ್ದವು.

4. ಪೊಲೀಸರು ಸದರಿ ಸಿಮ್‌ಗೆ ಸಂಬಂದಪಟ್ಟ ಮೊಬೈಲ್ ನಂಬರ್ ಗಳನ್ನು ಬರವಣಿಗೆ ಮಾಡಿಕೊಂಡಿದ್ದರು. ಸದರಿ ಬರವಣಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ದಿಃ05.07.2024 ರ ಮಹಜರ್ ನ್ನು ತೋರಿಸಿದಾಗ ಆ ದಿನ ಇದನ್ನೆ ಬರವಣಿಗೆ ಮಾಡಿದ್ದರು ಎಂದು ನುಡಿಯುತ್ತಾರೆ. ಇದಕ್ಕೆ ನಾನು ಸಹಿ ಕೂಡ ಮಾಡಿರುತ್ತೇನೆ ಎಂದು ಹೇಳಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು **ನಿ.ಪಿ.97** ಮತ್ತು ಅದರಲ್ಲಿ ಈ ಸಾಕ್ಷಿಯ ಸಹಿಯನ್ನು

**ನಿ.ಪಿ.97(ಎ)** ಎಂದು ಗುರುತಿಸಲಾಯಿತು.

5. ಪೊಲೀಸರು ನನಗೆ ನೀಡಿದ ನೋಟೀಸ್‌ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ದಿಃ05.07.2024 ರ ಪೊಲೀಸರು ನೀಡಿದ ನೋಟೀಸ್‌ನ್ನು ತೋರಿಸಿದಾಗ ನೋಡಿ ಗುರುತಿಸಿರುತ್ತಾರೆ. ಸದರಿ ನೋಟೀಸ್‌ನ್ನು **ನಿ.ಪಿ.98** ಮತ್ತು ಅದರಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.98(ಎ)** ಎಂದು ಗುರುತಿಸಲಾಯಿತು.

6. ಆ ದಿನ ಪೊಲೀಸರು ತಮ್ಮ ವಶಕ್ಕೆ ಪಡೆದ ಜಿಯೋ ಸಿಮ್‌ನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಪಿ.ಎಫ್. ನಂ.171-1/2024 ರಲ್ಲಿನ ಸೀಲಿನಿಂದ ಕೂಡಿದ ವಸ್ತುವನ್ನು ಹಾಜರುಪಡಿಸಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ, ಆರೋಪಿ ಪರ ವಕೀಲರ ಸಮಕ್ಷಮ ತೆರೆಯಲು ಮಾನ್ಯ ಪಿಪಿರವರು ಅನುಮತಿ ಕೋರಿರುತ್ತಾರೆ.

7. At this stage, Ld. Counsel for A1 & A2 objected for opening this sealed cover on the ground that the contents of the sealed cover is not pertains to the panchanama which is deposed by this witness.

8. Ld. Spl. PP drawn the attention of the court to the Pg.No. 1017 of the charge sheet, wherein the IO has

sought permission of the 42nd ACMM to use the SIM Card and Realme mobile to retrieve the date relating to whatsup, instagram ID and google time line data.

9. According to Ld. Counsel for A2, it is not the description of the properties mentioned in the panchanama. Hence, it cannot be marked.

10. Heard. On perusal of the entire evidence of PW97 and mahazar at Ex.P 97, the IO has seized one JIO company mobile SIM, witness identifies that he can identify the SIM which was seized in his presence through the Ex.P97.

11. If the cover is opened in the open court and if the JIO SIM is found in the cover and if it identified by the witness, it will assist both the parties to proceed with the matter in accordance with law, otherwise law will take its recourse. Therefore, sealed cover is permitted to open in the open court to ascertain whether the sim seized under

Ex.P97 is there in the sealed cover or not.

12. The said sealed cover is opened in the open court in the presence of Ld. Spl. PP and Ld. Sr. Defence counsel and other Ld. Defence counsels. The cover contains one Realme mobile with two SIMS sticked on the backside of the mobile phone. The witness has identified one JIO SIM attached on the back side of the mobile. (The SIM is bearing the identification number 89918610400653671298). The said JIO SIM is marked as **Ex.P99**.

13. ಇದಾದ ನಂತರ, ದಿಃ12.07.2024 ರಂದು ಪೊಲೀಸರು ಮತ್ತೆ ನೋಟೀಸ್ ಜಾರಿ ಮಾಡಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದರು. ಮೃತ ರೇಣುಕಾಸ್ವಾಮಿಯವರ ಹೆಂಡತಿಯಾದ ಸಹನಾರವರಿಂದ (ಚಾ.ಸಾ.9), ಮೃತ ರೇಣುಕಾಸ್ವಾಮಿಯವರ ಫೋಟೋಗಳನ್ನು ಸಂಗ್ರಹಿಸಬೇಕು ಎಂದು ಹಾಗು ಅದಕ್ಕೆ ಪಂಚರಾಗಿ ಸಹಕರಿಸಬೇಕು ಎಂದು ತಿಳಿಸಿದ್ದರು.

14. ನಂತರ ನಾನು, ನನಗೆ ಪರಿಚಯಸ್ಥರಾದ ಕಲ್ಲೇಶಯ್ಯ(ಚಾ.ಸಾ.50)ರವರು, ಪಿಎಸ್‌ಐರವರು ಹಾಗೂ ಅವರ ತಂಡ ಸೇರಿ ಚಿತ್ರದುರ್ಗದ ತುರುವುನೂರು ರಸ್ತೆಯಲ್ಲಿ ಇರುವ ವೆಂಕಟೇಶ್ವರ ಬಡಾವಣೆಯಲ್ಲಿ

ಇರುವ ಸದರ್ಮ ಸಧನ ಎಂಬ ಮನೆ ಅಂದರೆ ಮೃತ ರೇಣುಕಾಸ್ವಾಮಿಯವರ ಮನೆಗೆ ಹೋಗಿರುತ್ತೇವೆ. ನಾವು ಮನೆಗೆ ಹೋದಾಗ ಸಹನರವರು ಮನೆಯ ಹೊರಗೆ ಬಾಗಿಲ ಬಳಿ ಕುಳಿತಿದ್ದರು. ಆಗ ಪಿಎಸ್‌ಐರವರು ಮೃತ ರೇಣುಕಾಸ್ವಾಮಿಯವರ ಫೋಟೋ ಇದ್ದರೆ ಕೊಡಿ ಎಂದು ಸಹನರವರಿಗೆ ಕೇಳಿದಾಗ, ಅವರು ಇವೆ ಕೊಡುತ್ತೇನೆ ಎಂದು ಹೇಳಿ ಮೃತ ರೇಣುಕಾಸ್ವಾಮಿಯವರ 6 ಫೋಟೋಗಳನ್ನು ನೀಡಿರುತ್ತಾರೆ. ಸದರಿ 6 ಫೋಟೋಗಳನ್ನು ಒಂದು ಖಾಲಿ ಕವರ್ ನಲ್ಲಿ ಹಾಕಿ ಸೀಲು ಮಾಡಲಾಗಿತ್ತು. ನಂತರ ಪೊಲೀಸರು ತಮ್ಮೊಂದಿಗೆ ತಂದಿದ್ದ ಲ್ಯಾಪ್‌ಟಾಪ್‌ನಲ್ಲಿ ಸದರಿ ಫೋಟೋಗಳನ್ನು ಅಪ್‌ಲೋಡ್ ಮಾಡಿಕೊಂಡು ನಂತರ ಸದರಿ ಫೋಟೋಗಳನ್ನು ಕವರ್ನಲ್ಲಿ ಹಾಕಿ ಸೀಲ್ ಮಾಡಿದರು. ಸದರಿ ಸೀಲ್ ಮಾಡಿದ ಕವರ್ ಗೆ ನಾನು ಸಹ ಸಹಿ ಮಾಡಿರುತ್ತೇನೆ.

15. ಆ ದಿನ ಸಹನಾರವರು ಕೊಟ್ಟ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇವೆ. ಸಹನಾರವರು ಪಿಎಸ್‌ಐರವರಿಗೆ ಸದರಿ ಫೋಟೋಗಳನ್ನು ಕೊಡುವಾಗ ನಾನು ಮತ್ತು ಕಲ್ಲೇಶಯ್ಯರವರು ಇದ್ದೆವು. ಆ ಸಮಯದಲ್ಲಿ ಪೊಲೀಸರು ನಮ್ಮ ಫೋಟೋವನ್ನು ಸಹ ತೆಗೆದಿದ್ದರು. ಆ ಸಮಯದಲ್ಲಿ ಪೊಲೀಸರು ಒಂದು ಪ್ರಿಂಟ್‌ನ್ನು ಸಹ ತೆಗೆದಿದ್ದರು. ಸದರಿ ಒಂದು ಪ್ರಿಂಟ್‌ನ್ನು ನೋಡಿದರೆ ಗುರುತಿಸುತ್ತೇನೆ.

16. At this stage, Ld. Sr. Counsel for A2 objected for marking the photo on the ground that there is no 65B

Certificate enclosed along with the photo and memory card relating the development of this photo is not produced and submitted that, this photo cannot be marked & confronted to the witness.

17. Ld. Spl.PP submitted that, the identity of the deceased Renukaswamy from the inception till this date not disputed and the photographs are taken at an undisputed point of time and the said phots were received from the wife of the deceased and it is also submitted that there is no dispute that these photographs(6photos) are of the deceased Renukaswamy, hence prayed to open the sealed cover and mark the documents on behalf of prosecution.

18. Ld. Sr. Defence counsel for A2 submits that photo itself are not admissible for the reason that there is no 65B Certificate, no memory card and no negatives and further disputed the identity of the deceased person in these photos.

19. Heard both the side. Admittedly this is sealed cover and according to the prosecution, these photos were handed over by the wife fo the deceased stating to be the photographs of her husband deceased Renukaswamy. Therefore, at this stage, it cannot ascertain that when these photos were taken & who has taken these photographs. As the wife of the deceased herself has identified the person in the photos as of her husband deceased Renukaswamy, the question of identity of the person found in these photos by the defence shall be considered at the time of appreciation of the evidence. If these photos are not belongs to deceased Renukaswamy, the law will take its own course.

20. Subject to objections of the Ld. Sr. Counsel for A2, the sealed cover is taken on record.

21. ಈ ದಿನ ನ್ಯಾಯಾಲಯದ ಮುಂದೆ ಪಿ.ಎಫ್. ನಂ.166/2024 ರಲ್ಲಿನ ಸೀಲಿನಿಂದ ಕೂಡಿದ ವಸ್ತುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ತೆರೆದ ನ್ಯಾಯಾಲಯದಲ್ಲಿ ಮಾನ್ಯ ಪಿಪಿ ಮತ್ತು ಮಾನ್ಯ ಆರೋಪಿಗಳ ಪರ

ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಸೀಲ್ಡ ಲಕೋಟೆಯನ್ನು ತೆಗೆದು ನೋಡಲಾಗಿ ಅದರಲ್ಲಿ ಆರು ಫೊಟೋಗಳು ಇರುವುದು ಕಂಡುಬಂದಿರುತ್ತದೆ. ಸಾಕ್ಷಿಗೆ ಸದರಿ ಆರು ಫೊಟೋಗಳನ್ನು ತೋರಿಸಿದಾಗ, ಅವುಗಳನ್ನು ನೋಡಿ ಇದೇ ಆರು ಫೊಟೋಗಳನ್ನು ಮೃತ ರೇಣುಕಾಸ್ವಾಮಿಯವರ ಹೆಂಡತಿ ಸಹನಾರವರು ಪಿಎಸ್ಐ ರವರಿಗೆ ನೀಡಿರುತ್ತಾರೆ. ಸದರಿ ಆರು ಫೊಟೋಗಳನ್ನು **ನಿ.ಪಿ.100 ರಿಂದ 105** ಮತ್ತು ಕವರ್ ನ್ನು **ನಿ.ಪಿ.106** ಮತ್ತು ಕವರ್ ಮೇಲೆ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.106(ಎ)** ಎಂದು ಗುರುತಿಸಲಾಯಿತು.

**ಪ್ರಶ್ನೆಃ** ಸದರಿ ಫೊಟದಲ್ಲಿ ಇರುವ ವ್ಯಕ್ತಿ ನಿಮಗೆ ಪರಿಚಯವೇ ಹಾಗೂ ಎಷ್ಟು ವರ್ಷಗಳಿಂದ ಪರಿಚಯ?

**ಉತ್ತರಃ** ಸದರಿ ವ್ಯಕ್ತಿ ರೇಣುಕಾಸ್ವಾಮಿ ಎಂದು ಗೊತ್ತು ಹಾಗೂ ಅವರು ನನಗೆ ಕಳೆದ 15 ವರ್ಷಗಳಿಂದ ಗೊತ್ತು.

22. ಆ ದಿನ ಪೊಲೀಸರು ಪ್ರಿಂಟ್ ತೆಗೆದ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ದಿಃ12.07.2024 ರಂದು ಮಾಡಿದ ಮಹಜರ್ ನ್ನು ತೋರಿಸಿದಾಗ ಅದರಲ್ಲಿ ಪ್ರತಿ ಪುಟದಲ್ಲಿ ಇರುವ ತಮ್ಮ ಸಹಿಗಳನ್ನು ಹಾಗೂ ಅದರಲ್ಲಿ ಇರುವ ಫೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ಈಗ **ನಿ.ಪಿ.107** ಮತ್ತು ಕೊನೆಯ ಪುಟದಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.107(ಎ)** ಎಂದು ಗುರುತಿಸಲಾಯಿತು.

**ಪ್ರಶ್ನೆ:** ನೀವು ಏಕೆ ನಿ.ಪಿ.107 ರಲ್ಲಿ ಸಹಿಗಳನ್ನು ಮಾಡಿದ್ದೀರಿ?

**ಉತ್ತರ:** ಮೃತ ರೇಣುಕಾಸ್ವಾಮಿಯವರ ಫೋಟೋಗಳನ್ನು ವಶಪಡಿಸಿಕೊಂಡ ವಿಷಯಕ್ಕೆ ಸಂಬಂಧಿಸಿದಂತೆ ನಾನು ಈ ಸಹಿಗಳನ್ನು ಮಾಡಿರುತ್ತೇನೆ.

23. ಪೊಲೀಸರು ಸಹನಾರವರು ಫೋಟೋಗಳನ್ನು ನೀಡುವಾಗ ತೆಗೆದ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸುತ್ತಿರುವಾಗ, Ld. Sr. Counsel for A2 submitted that this photo is not accompanied with certificate U/Sec. 65B and memory card is not enclosed and seriously objected for marking the photo.

24. Ld. Spl. PP submits that the photo is taken in a I-Phone14 and it has only internal storage and hence use of memory card does not arise. The Ld. Spl. PP submits in this regard 65B Certificate is enclosed in Pg.No.948 of the charge sheet.

25. In Pg.No.948 of the charge sheet, the certificate U/Sec. 65B of Evidence Act, relating to the photo is produced by the prosecution. In view of certificate U/Sec. 65B relating to the photo is produced by the prosecution,

subject to serious objections of Ld. Defence counsel for A2, the said photo is marked as **Ex.P108.**

26. ಸದರಿ ಫೋಟೋದಲ್ಲಿ ಯಾರು ಯಾರು ಇದ್ದಾರೆ ಎಂದು ಗುರುತಿಸಲು ಆಗುತ್ತದೆಯೇ ಎಂದು ಕೇಳಿದಾಗ, ಸಾಕ್ಷಿ ಸದರಿ ಫೋಟೋವನ್ನು ನೋಡಿ, ಎಡದಿಂದ ಬಲಕ್ಕೆ , ಮೃತ ರೇಣುಕಾಸ್ವಾಮಿಯವರ ಹೆಂಡತಿ ಸಹನಾ, ಅವರ ಪಕ್ಕದಲ್ಲಿ ಪಿಎಸ್ಐ ವಿನಾಯಕ್, ಅವರ ಪಕ್ಕದಲ್ಲಿ ಅವರ ಸಿಬ್ಬಂದಿ, ಅವರ ಪಕ್ಕದಲ್ಲಿ ನಾನು ಹಾಗೂ ನನ್ನ ಪಕ್ಕದಲ್ಲಿ ಕಲ್ಲೇಶಯ್ಯ ಇದ್ದಾರೆ ಎಂದು ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ 2 ನೇ ಆರೋಪಿ ಪರ ಶ್ರೀ. ಹೆಚ್.ಪಿ. Designated Sr. counsel:</u>**

**ಪ್ರಶ್ನೆಃ** ಮೃತ ರೇಣುಕಾಸ್ವಾಮಿಯವರು ನಿಮಗೆ ನೆಂಟರೆ ಅಥವಾ ಸ್ನೇಹಿತರೇ?

**ಉತ್ತರಃ** ಮೃತ ರೇಣುಕಾಸ್ವಾಮಿಯವರು ನನಗೆ ನೆಂಟರಲ್ಲ, ಆದರೆ ಅವರು ನನ್ನ ಸ್ನೇಹಿತರು.

27. ನಾನು ಅವರ ಮನೆಗೆ ಹಲವಾರು ಬಳಿ ಹೋಗಿರುತ್ತೇನೆ. ನನಗೆ ಮೃತರ ಹೆಂಡತಿ ಮತ್ತು ಅವರ ತಂದೆತಾಯಿ ಪರಿಚಯ. ನಾನು ವಾಸವಾಗಿರುವ ಮನೆಯಿಂದ ಮೃತ ರೇಣುಕಾಸ್ವಾಮಿಯವರ ಮನೆ ಸುಮಾರು 8 ಕೀ.ಮಿ ದೂರದಲ್ಲಿ ಇದೆ ಎಂದರೆ ಸುಳ್ಳು. ಮೃತ ರೇಣುಕಾಸ್ವಾಮಿ ಅವರ ಜೀವಿತ ಕಾಲದಲ್ಲಿ ವೆಂಕಟರಮಣಸ್ವಾಮಿ ಬಡಾವಣೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ವೆಂಕಟರಮಣಸ್ವಾಮಿ ಬಡಾವಣೆಯ ಪಕ್ಕದಲ್ಲಿ ಕೇಶವಸ್ವಾಮಿ ಬಡಾವಣೆ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಹತ್ತಿರದಲ್ಲಿ ಇದೆ ಎನ್ನುತ್ತಾರೆ.

28. ವೆಂಕಟರಮಣಸ್ವಾಮಿ ಬಡಾವಣೆಯಲ್ಲಿ ಮೃತ ರೇಣುಕಾಸ್ವಾಮಿಯ ಅಕ್ಕಪಕ್ಕದಲ್ಲಿ ಬೇರೆ ಮನೆಗಳು ಇರುವುದಿಲ್ಲ, ಆದರೆ ಬಡಾವಣೆಯಲ್ಲಿ ಸಾಕಷ್ಟು ಮನೆಗಳು ಇವೆ. ಸದರಿ ಮೃತ ರೇಣುಕಾಸ್ವಾಮಿಯ ಮನೆಯ ದಕ್ಷಿಣ ದಿಕ್ಕಿನಲ್ಲಿ ದಯಾನಂದರವರ ಕಾಂಪ್ಲೆಕ್ಸ ಕಟ್ಟುತ್ತಿದ್ದರು ಎಂದರೆ ಸರಿ. ಸದರಿ ಮನೆಯ ಉತ್ತರಕ್ಕೆ ಸಾರ್ವಜನಿಕರ ರಸ್ತೆ ಇದೆ, ಅಲ್ಲಿ ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಸರಿ.

29. ಚಾ.ಸಾ.59-ಪರಮಾನಂದಯ್ಯರವರು ಬೆಂಗಳೂರಿನ ವಾಸಿಗರು ಎಂದರೆ ಸರಿ. ಸದರಿ ಪರಮಾನಂದಯ್ಯ ನನಗೆ ಸುಮಾರು 20 ವರ್ಷಗಳಿಂದ ಪರಿಚಯಸ್ಥರು. ಚಾ.ಸಾ.50-ಕಲ್ಲೇಶಯ್ಯರವರು ಗುತ್ತಿನಾಡು ಗ್ರಾಮ, ಐಯನಳ್ಳಿ ಪೋಸ್ಟ, ಹಿರೆಗುಂಟನೂರು ಹೋಬಳಿ, ಚಿತ್ರದುರ್ಗ ತಾಲ್ಲೂಕು ವಾಸಿ ಎಂದರೆ ಸರಿ. ಸದರಿ ಕಲ್ಲೇಶಯ್ಯರವರು ಸುಮಾರು ವರ್ಷಗಳಿಂದ ಪರಿಚಯ. ನಾನು ಮತ್ತು ಅವರು ಒಂದು ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಸದರಿ ಸಂಘಟನೆಗೆ ಹೆಸರು ಇಲ್ಲ, ಆದರೆ ಅದು ಸಮಾಜಸೇವೆಯಲ್ಲಿ ತೊಡಗಿದೆ.

30. ಸಂಘಟನೆಗೆ ಎಷ್ಟು ಅವಧಿಯ ಅಂತರದಲ್ಲಿ ಸೇರಿಕೊಳ್ಳುತ್ತಿದ್ದೀರಿ ಎಂದರೆ, ಸಾಕ್ಷಿ ಅದು ಹಾಗೆ ಇರುವುದಿಲ್ಲ ಎನ್ನುತ್ತಾರೆ. ನಾನು ಮಾಡಿಕೊಂಡಿರುವ ಸಂಘಟನೆ ಭಜರಂಗ ದಳ ಎಂದರೆ ಸರಿಯಲ್ಲ. ಸದರಿ ಸಂಘಟನೆಯಲ್ಲಿ ಮೃತ ರೇಣುಕಾಸ್ವಾಮಿ ಸೇರಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

31. ಗುತ್ತಿನಾಡು ಗ್ರಾಮದಿಂದ ವೆಂಕಟರಮಣಸ್ವಾಮಿ ಬಡಾವಣೆ ಸುಮಾರು 4-5 ಕೀ.ಮಿ. ದೂರದಲ್ಲಿ ಇದೆ. ಮೃತ ರೇಣುಕಾಸ್ವಾಮಿಯ ವಾಸವಾಗಿದ್ದ

ಬಡಾವಣೆ ಯಾವ ಪೊಲೀಸ್ ಠಾಣೆಗೆ ಬರುತ್ತದೆ ಎಂದರೆ ಸಾಕ್ಷಿ ಅದು ಬಡಾವಣೆ ಪೊಲೀಸ್ ಠಾಣೆಗೆ ಬರುತ್ತದೆ, ಆದರೆ ನಿಖರವಾದ ಪೊಲೀಸ್ ಠಾಣೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

32. ದಿಃ05.07.2024 ರಂದು ಕಾಮಾಕ್ಷಿಪಾಳ್ಯ ಪೊಲೀಸರು ನಿಮಗೆ ಠಾಣೆಗೆ ಕರೆಸಿದ್ದರ ಎಂದರೆ, ಸಾಕ್ಷಿ ಆ ದಿನ ಕರೆಸಿರಲಿಲ್ಲ. ಅದೇ ರೀತಿ ಬಡಾವಣೆ ಪೊಲೀಸ್ ಠಾಣೆ ಪೊಲೀಸರು ಠಾಣೆಗೆ ಕರೆಸಿರಲಿಲ್ಲ, ಆದರೆ ಪೊಲೀಸರು ಮೃತ ರೇಣುಕಾಸ್ವಾಮಿಯವರ ಮನೆಗೆ ಕರೆಸಿದ್ದರು.

**ಪ್ರಶ್ನೆಃ** ಬಡಾವಣೆ ಪೊಲೀಸರು ನಿಮಗೆ ಕರೆ ಮಾಡಿ ಮೃತ ರೇಣುಕಾಸ್ವಾಮಿಯವರ ಕೇಸು ಆಗಿದೆ ಅದ್ದಕ್ಕಾಗಿ ಮೃತ ರೆಣುಕಾಸ್ವಾಮಿಯವರ ಮನೆಗೆ ಬರಬೇಕು ಎಂದು ತಿಳಿಸಿದ್ದರಾ?

**ಉತ್ತರಃ** ಯಾವ ಪೊಲೀಸರು ಎಂದು ಅವರ ಹೆಸರು ನನಗೆ ಗೊತ್ತಿಲ್ಲ, ಆದರೆ ಮೃತ ರೇಣುಕಾಸ್ವಾಮಿಯವರ ಮನೆಗೆ ಬರಲು ತಿಳಿಸಿದ್ದರು.

**(ಈ ಹಂತದಲ್ಲಿ ನ್ಯಾಯಾಲಯದ ಮಧ್ಯಾಹ್ನ ಊಟದ ಸಮಯವಾದ್ದರಿಂದ, ಪಾಟಿಸವಾಲು ಮುಂದೂಡಲಾಯಿತು.)**

**(ಈ ಹಂತದಲ್ಲಿ 2 ನೇ ಆರೋಪಿ ಪರ ವಕೀಲರು ಮುಂದುವರೆದ ಪಾಟಿಸವಾಲು ನಾಳೆ ಮಾಡುವುದಾಗಿ ಕೋರಿದ್ದರಿಂದ ಮುಂದುವರೆದ ಪಾಟಿಸವಾಲು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**<u>ದಿನಾಂಕಃ23.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿಸು</u>**

**<u>ಮುಂದುವರೆದ ಪಾಟೀಸವಾಲುಃ 2 ನೇ ಆರೋಪಿ ಪರ ಶ್ರೀ. ಹೆಚ್.ಪಿ. Designated Sr. counsel:</u>**

33. ಈ ಸಿಮ್‌ನ್ನು ವಶಪಡಿಸಿಕೊಳ್ಳುವ ಮುನ್ನ, ಈ ಘಟನೆ ಕುರಿತು ದಿನಪತ್ರಿಕೆ ಮತ್ತು ಟಿವಿ ಮಾಧ್ಯಮಗಳಲ್ಲಿ ಸಾಕಷ್ಟು ಪ್ರಚಾರವಾಗಿತ್ತು ಎಂದರೆ ಸರಿ. ಸದರಿ ದಿನ ಪತ್ರಿಕೆಗಳನ್ನು ಹಾಗೂ ಟಿವಿ ಮಾಧ್ಯಮಗಳಲ್ಲಿ ಬಂದ ದೃಶ್ಯಾವಳಿಗಳನ್ನು ನಾನು ನೋಡಿದ್ದೇನೆ.

34. ದಿಃ05.07.2024 ರಂದು, ನೀವು ಆ ಮನೆಗೆ ಹೋದಾಗ ಅಲ್ಲಿ ಪೊಲೀಸರು ಇದ್ದರೇ ಎಂದರೆ, ಸಾಕ್ಷಿ ನಾವು ಮತ್ತು ಅವರ ಒಟ್ಟಿಗೆ ಹೋಗಿದ್ದೇವೆ ಎಂದು ನುಡಿಯುತ್ತಾರೆ. ನಾವು ರೇಣುಕಾಸ್ವಾಮಿ ಮನೆ ಹತ್ತಿರ ಒಟ್ಟಿಗೆ ಸೇರಿ ಅಲ್ಲಿಂದ ಮನೆಯ ಒಳಗೆ ಒಟ್ಟಿಗೆ ಹೋಗಿದ್ದೇವೆ. ರೇಣುಕಾಸ್ವಾಮಿಯವರ ಮನೆ ಹತ್ತಿರ ಪೊಲೀಸರು ಮೊದಲೇ ಇದ್ದು, ಅವರು ಕರೆ ಮಾಡಿದ ನಂತರ ನಾನು ಅಲ್ಲಿಗೆ ಹೋಗಿ ಅವರೊಂದಿಗೆ ಸೇರಿಕೊಂಡಿರುತ್ತೇನೆ.

35. ನಾವು ರೇಣುಕಾಸ್ವಾಮಿಯವರ ಮನೆಗೆ ಹೋದಾಗ ಅವರ ತಂದೆ ಕಾಶಿನಾಥರವರು ಇದ್ದು, ಅವರನ್ನು ನಾನು ಮಾತನಾಡಿಸಿರುತ್ತೇನೆ. ನಿ.ಪಿ.99 ಸಿಮ್ ನ್ನು ಅಮಾನತ್ತುಪಡಿಸಿಕೊಳ್ಳುವಾಗ, ಅದರ ನಂಬರ್ ನ್ನು ನಾನು ಬರೆದುಕೊಂಡಿರುವುದಿಲ್ಲ ಹಾಗೂ ಈಗಲೂ ಹಾಗೇಯೇ ಹೇಳಲು ಆಗುವುದಿಲ್ಲ. ಸದರಿ ಸಿಮ್ ನ್ನು ಅಮಾನತ್ತುಪಡಿಸಿಕೊಳ್ಳುವಾಗ ಪೊಲೀಸರು ವಿಡಿಯೋಗ್ರಫಿ ಮಾಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆ ದಿನ ನನ್ನನ್ನು ಮತ್ತು

ಪರಮಾನಂದರವನ್ನು ನಿಲ್ಲಿಸಿ ಪೊಲೀಸರು ಫೋಟೋ ತೆಗೆದಿರುವುದಿಲ್ಲ.

36. ನಿ.ಪಿ.97 ಮಹಜರ್ ನ ಮೊದಲು ಮತ್ತು ಎರಡನೇ ಪುಟದಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ನಿ.ಪಿ.97 ರಲ್ಲಿ ಇರುವ ಬರವಣಿಗೆ ಯಾರು ಬರೆದಿದ್ದಾರೆ ಎಂದು, ಅವರ ಹೆಸರು ನನಗೆ ಗೊತ್ತಿಲ್ಲ, ಆದರೆ ಅವರು ಪೊಲೀಸ್ ಸಿಬ್ಬಂದಿಯಾಗಿದ್ದರು. ನಿ.ಪಿ.97 ರಲ್ಲಿ ಇರುವ ನನ್ನ ಈ ಸಹಿಯನ್ನು ಖಾಲಿ ಪುಟಕ್ಕೆ ತೆಗೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ.

37. ಸದರಿ ಸಿಮ್‌ನ ಮೇಲೆ ನನ್ನ ಗುರುತು ಇಲ್ಲ ಎಂದರೆ ಸರಿ. ದಿಃ05.07.2024 ರಂದು ಮೊದಲನೆ ಬಾರಿ ರೇಣುಕಾಸ್ವಾಮಿಯವರ ಮನೆಗೆ ಹೋದಾಗ ಅವರ ಹೆಂಡತಿಗೆ ಸಹನಾಗೆ ಪೊಲೀಸರು ನನ್ನ ಸಮಕ್ಷಮ ರೇಣುಕಾಸ್ವಾಮಿಯವರ ಫೋಟೋಗಳನ್ನು ಕೇಳಿರುವುದಿಲ್ಲ. ಪೊಲೀಸರು ಜಿಯೋ ಸಿಮ್‌ನ ಪ್ರತಿಯನ್ನು ಅವರ ಕುಟುಂಬಸ್ಥರಿಗೆ ಮಾತ್ರ ಕೊಡುವುದಾಗಿ ಹೇಳಿರುವ ದಾಖಲೆಯನ್ನು ಪೊಲೀಸರು ನನಗೆ ತೋರಿಸಿರುವುದಿಲ್ಲ. ಸದರಿ ವಿಚಾರವನ್ನು ನಿ.ಪಿ.97 ರ ಮಹಜರ್ ನಲ್ಲಿ ಬರೆದಿಲ್ಲ ಎಂದರೆ, ಸಾಕ್ಷಿ ಇರಬಹುದು ನನಗೆ ನೆನಪಿಲ್ಲ ಎನ್ನುತ್ತಾರೆ.

38. ಯಾವ ದಿನಾಂಕದಂದು ಸಹನಾರವರು ಈ ಸಿಮ್‌ನ್ನು ಪಡೆದಿದ್ದರು ಎಂದು ನನಗೆ ಹೇಳಿರುವುದಿಲ್ಲ. ಯಾವುದೇ ಕಂಪನಿಯವರು ಸಿಮ್ ನ್ನು ನೀಡುವಾಗ ಅದರ ನಂಬರ್ ಮತ್ತು ಪ್ಯಾಕೆಟ್ ನೀಡುತ್ತಾರೆ ಎಂದರೆ ಸರಿ. ಸದರಿ ಸಿಮ್‌ನ ಪ್ಯಾಕೆಟ್ ಮತ್ತು ನಂಬರ್ ನ್ನು ನೀವು ನೋಡಿದ್ದೀರಾ ಎಂದರೆ, ಸಾಕ್ಷಿ ಸದರಿ ಚಿಪ್‌ನ್ನು

ಒಳಗೊಂಡ ಸಿಮ್ ಕಾರ್ಡನ್ನು ನೋಡಿದ್ದೇನೆ ಎನ್ನುತ್ತಾರೆ. ಸದರಿ ಸಿಮ್ ಕಾರ್ಡ ಮೇಲೆ ನಾನು ಸಹಿ ಮಾಡಿರುವುದಿಲ್ಲ. ಪೊಲೀಸರು ಸದರಿ ಸಿಮ್ ಕಾರ್ಡನ್ನು ವಶಪಡಿಕೊಂಡಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

39. ದಿಃ05.07.2024 ಕ್ಕೆ ನಾನು ರೇಣುಕಾಸ್ವಾಮಿಯವರ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.97 ಪಂಚನಾಮೆಯನ್ನು ಸದರಿ ಸ್ಥಳದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ರೇಣುಕಾಸ್ವಾಮಿಯವರ ಮನೆಯವರಿಗೆ ನಾನು ತುಂಬಾ ಹತ್ತಿರದವನಾದ್ದರಿಂದ, ಕಾಶಿನಾಥರವರು ನನ್ನನ್ನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ, ಠಾಣೆಯಲ್ಲಿ ನಿ.ಪಿ.97(ಎ)ರಂತೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ನಾನು ಹೋಗಿರುವುದೇ ಇಲ್ಲ ಎನ್ನುತ್ತಾರೆ.

40. ನಿ.ಪಿ.98 ಕ್ಕೆ ನೀವು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೀರಾ ಎಂದರೆ, ಸಾಕ್ಷಿ ರೇಣುಕಾಸ್ವಾಮಿಯವರ ಮನೆಯಲ್ಲಿ ಮಾಡಿರುತ್ತೇನೆ ಎನ್ನುತ್ತಾರೆ. ದಿಃ12.07.2024 ರಂದು ಯಾವ ಪೊಲೀಸರು ನಿಮಗೆ ಕರೆ ಮಾಡಿದ್ದರು ಎಂದರೆ, ಸಾಕ್ಷಿ ಪೊಲೀಸರು ಎಂದು ಕರೆ ಮಾಡಿದ್ದರು, ಆದರೆ ಯಾವ ಪೊಲೀಸರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಪೊಲೀಸರಿಗೆ ನನ್ನ ಫೋನ್ ನಂಬರ್ ನ್ನು ದಿಃ05.07.2024 ರಂದು ಕೊಟ್ಟಿದ್ದೆ.

41. ನಾನು ಕಲ್ಲೇಶಯ್ಯರವರನ್ನು ಕರೆಸಿರುವುದಿಲ್ಲ. ಆ ದಿನ ನಾನು ಕಲ್ಲೇಶಯ್ಯರವರನ್ನು ರೇಣುಕಾಸ್ವಾಮಿಯವರ ಮನೆಯಲ್ಲಿ ಬೇಟಿ ಮಾಡಿರುತ್ತೇನೆ.

**ಪ್ರಶ್ನೆಃ** ನೀವು ರೇಣುಕಾಸ್ವಾಮಿಯವರ ಮನೆಗೆ ಹೋಗುವ ಮುನ್ನವೇ ಕಾಮಾಕ್ಷಿಪಾಳ್ಯ ಪೊಲೀಸರು ರೇಣುಕಾಸ್ವಾಮಿಯವರ ಮನೆಯಲ್ಲಿ ಇದ್ದರೇ?

**ಉತ್ತರಃ** ನಾನು ರೇಣುಕಾಸ್ವಾಮಿಯವರ ಮನೆಗೆ ಹೋಗುವಷ್ಟರಲ್ಲಿ ಪೊಲೀಸರು ಇದ್ದರು, ಅಲ್ಲಿಂದ ನಾವು ಒಟ್ಟಿಗೆ ರೇಣುಕಾಸ್ವಾಮಿಯವರ ಮನೆಯ ಒಳಗೆ ಹೋಗಿರುತ್ತೇವೆ.

42. ನೀವು ರೇಣುಕಾಸ್ವಾಮಿಯವರ ಮನೆಯ ಒಳಗಡೆ ಹೋಗುವಷ್ಟರಲ್ಲಿ ಸಹನಾ ಫೊಟೋಗಳನ್ನು ತೆಗೆದು ಇಟ್ಟುಕೊಂಡಿದ್ದರೇ ಎಂದರೆ, ಸಾಕ್ಷಿ ಅದು ನನಗೆ ಈಗ ನೆನಪಿಲ್ಲ ಎನ್ನುತ್ತಾರೆ. ಪೊಲೀಸರು ರೇಣುಕಾಸ್ವಾಮಿಯವರ ಫೊಟೋಗಳಿಗೋಸ್ಕರ ರೇಣುಕಾಸ್ವಾಮಿಯವರ ಮನೆಯನ್ನು ತಪಾಸಣೆ ಮಾಡಿದ್ದರೇ ಎಂದರೆ, ಸಾಕ್ಷಿ ನನ್ನ ಸಮಕ್ಷಮ ಸಹನಾರವರು ಫೊಟೋಗಳನ್ನು ತಂದು ಕೊಟ್ಟಿದ್ದರು ಎನ್ನುತ್ತಾರೆ. ಈ ಫೊಟೋಗಳನ್ನು ಅಮಾನತ್ತುಪಡಿಸಿಕೊಳ್ಳುವಾಗ ಪೊಲೀಸರು ವಿಡಿಯೋಗ್ರಫಿ ಮಾಡಿರುತ್ತಾರೆ. ಈ ಫೊಟೋಗಳ ಮೇಲೆ ನಿಮ್ಮ ಗುರುತುಗಳನ್ನು ಹಾಕಿಸಿಕೊಂಡಿರುವುದಿಲ್ಲ ಎಂದರೆ, ಸಾಕ್ಷಿ ಕವರ್ ಮೇಲೆ ಹಾಕಿಸಿಕೊಂಡಿರುತ್ತಾರೆ ಎನ್ನುತ್ತಾರೆ.

43. ಪಂಚನಾಮೆ ಬರೆಯುವಾಗ ಮತ್ತು ಪಂಚನಾಮೆಗೆ ನಾವು ಸಹಿ ಮಾಡುವಾಗ, ಪೊಲೀಸರು ಫೊಟೋಗಳನ್ನು ಹಾಗೂ ವಿಡಿಯೋಗಳನ್ನು ತೆಗೆದಿರುವುದಿಲ್ಲ ಎಂದರೆ, ಸಾಕ್ಷಿ ಫೊಟೋ ತೆಗೆದಿರುವುದು ನನಗೆ ಗೊತ್ತು, ಆದರೆ ವಿಡಿಯೋ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ಪಂಚನಾಮೆಗೆ ಸಹಿ

ಮಾಡುವ ಫೋಟೋ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಇಲ್ಲ, ಸಾಕ್ಷಿ ಮುಂದುವರೆದು ಪಂಚನಾಮೆಗೆ ನನ್ನ ಸಹಿ ಇದೆ ಎನ್ನುತ್ತಾರೆ. ಅದೇ ರೀತಿ ಕಲ್ಲೇಶಯ್ಯರವರು ಪಂಚನಾಮೆಗೆ ಮಾಡುತ್ತಿರುವ ಫೋಟೋ ಇಲ್ಲ ಎಂದರೆ, ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

44. ನಿ.ಪಿ.100 ರಿಂದ 105 ಫೋಟೋಗಳಲ್ಲಿ ನಿಮ್ಮ ಸಹಿ ಇರುವುದಿಲ್ಲ ಎಂದರೆ, ಸಾಕ್ಷಿ ನನ್ನ ಸಮಕ್ಷಮ ಸದರಿ ಫೋಟೋಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ನಾನು ರೇಣುಕಾಸ್ವಾಮಿಯವರು ಸುಮಾರು 15-20 ವರ್ಷಗಳಿನಂದ ಪರಿಚಯ ಇದ್ದ ಕಾರಣ, ಅವರ ತಂದೆ ಕಾಶಿನಾಥ್ನ ನನ್ನನ್ನು ಮತ್ತು ಕಲ್ಲೇಶಯ್ಯರವರನ್ನು ಕರೆಸಿ ಈ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೊಲೀಸರು ನನ್ನನ್ನು ಪಂಚನಾಮೆಗೆ ಕರೆದಾಗ, ನಾನು ಈ ಸಹಿಗಳನ್ನು ಮಾಡಿರುತ್ತೇನೆ ಎನ್ನುತ್ತಾರೆ. ಕಾಶಿನಾಥ ಮತ್ತು ಪೊಲೀಸರ ಉತ್ತೇಜನದ ಮೆರೆಗೆ, ಅವರಿಗೆ ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

45. ನಾನು ಹೇಳಿದಂತೆ ದಿಃ05.07.2024 ಮತ್ತು 12.07.2024 ರಂದು ಮೃತ ರೇಣುಕಾಸ್ವಾಮಿಯವರ ಮನೆಯಲ್ಲಿ ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ದಿಃ05.07.2024 ರಂದು ಮತ್ತು 12.07.2024 ರಂದು ಪೊಲೀಸರು ರೇಣುಕಾಸ್ವಾಮಿಯವರ ಮನೆ ಹತ್ತಿರ ಬಂದಾಗ, ಬಡಾವಣೆಯ ಜನರು ಅಲ್ಲಿ ಸೇರಿದ್ದರ ಎಂದರೆ, ಸಾಕ್ಷಿ ಸೇರಿರುವುದಿಲ್ಲ

ಎನ್ನುತ್ತಾರೆ.

46. ಮೊದಲನೇ ಬಾರಿಗೆ ಮತ್ತು ಎರಡನೇ ಬಾರಿಗೆ ಪಿಎಸ್‌ಐ-ವಿನಾಯಕ್ ರವರೇ ಬಂದಿದ್ದರು. ಆ ಸಮಯದಲ್ಲಿ ಅಕ್ಕಪಕ್ಕದ ಜನರನ್ನು ಪಂಚರಾಗಿ ಸಹಕರಿಸಬೇಕು ಎಂದು, ಸದರಿ ಪೊಲೀಸರು ಕರೆದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಹಾಗೂ ನನ್ನ ಸಮಕ್ಷಮ ಕರೆದಿರುವುದಿಲ್ಲ.

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ. ಎಸ್.ಬಿ. ವಕೀಲರಿಂದ:**

47. ನನ್ನ ಮುಖ್ಯ ವಿಚಾರಣೆಯ ಪ್ಯಾರ ನಂ.4 ರಲ್ಲಿ ಹೇಳಿರುವ "ಪೊಲೀಸರು ಸದರಿ ಸಿಮ್‌ಗೆ ಸಂಬಂಧಪಟ್ಟ ಮೊಬೈಲ್ ನಂಬರ್ ಗಳನ್ನು ಬರವಣಿಗೆ ಮಾಡಿಕೊಂಡಿದ್ದರು" ಎಂದು ಹೇಳಿದ್ದು ಸುಳ್ಳು ಎಂದರೆ, ಸಾಕ್ಷಿ ನನಗೆ ಪ್ರಶ್ನೆ ತಿಳಿದಿರುವುದಿಲ್ಲ ಎಂದು ಕೇಳಿ, ಮತ್ತೆ ಪ್ರಶ್ನೆ ಕೇಳಿದಾಗ, ಸಾಕ್ಷಿ ಅದು ಸರಿ ಇದೆ ಎಂದು ನುಡಿಯುತ್ತಾರೆ.

48. “ಮೊಬೈಲ್ ನಂಬರ್ ಗಳನ್ನು" ಎಂದರೆ ಒಂದಕ್ಕಿಂತ ಹೆಚ್ಚು ಸಂಖ್ಯೆಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಅರ್ಥೈಸಿಕೊಂಡಂತೆ ಆ ಮೊಬೈಲ್ ನಂಬರ್ ನಲ್ಲಿ ಹಲವಾರು ಸಂಖ್ಯೆಗಳು ಇದ್ದವು ಎನ್ನುತ್ತಾರೆ. ಕಾಮಾಕ್ಷಿಪಾಳ್ಯ ಪೊಲೀಸರಾದ ಪಿಎಸ್‌ಐ ವಿನಾಯಕ್ ಮತ್ತು ಅವರ ತಂಡದವರು ಸದರಿ ಸಿಮ್ ಗೆ ಸಂಬಂಧ ಪಟ್ಟಂತೆ ಮೊಬೈಲ್ ನಂಬರ್ ನ್ನು ಬರವಣಿಗೆ ಮಾಡಿಕೊಂಡರು. ಅವರು ಪರಿಶೀಲನೆ ಮಾಡಿ ಬರೆದುಕೊಂಡಿದ್ದರು. ಆ ಸಿಮ್ ಮೇಲೆ ಇರುವ ನಂಬರ್ ಗಳನ್ನು ಪರಿಶೀಲನೆ ಮಾಡಿದ್ದರು ಹಾಗೂ ಅದರ ಮೇಲೆ ಇದ್ದ ಜಿಯೋ ಎಂಬ

ಬರವಣಿಗೆಯನ್ನು ಸಹ ಪರಿಶೀಲನೆ ಮಾಡಿದ್ದರು. ಸದರಿ ಸಿಮ್ ಮೇಲೆ 9019292387 ಕಂಡು ಬಂದಿಲ್ಲ ಎಂದು ಸೂಚಿಸಿದಾಗ, ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

49. ಸಿಮ್ ನ್ನು ಪರಿಶೀಲನೆ ಮಾಡದೇ, 9019292387 ನಂಬರ್ ಪಂಚನಾಮೆಯಲ್ಲಿ ಬರೆಯಲಾಗಿದೆ ಎಂದರೆ, ಸಾಕ್ಷಿ ಅವರು ನನ್ನ ಸಮಕ್ಷಮ ಸಿಮ್ ನ್ನು ಪರಿಶೀಲನೆ ಮಾಡಿದ್ದರು ಹಾಗೂ ಮೊಬೈಲ್ ನಂಬರ್ ನ್ನು ಕಂಪನಿಗೆ ಅಪ್ಲೈ ಮಾಡಿ ಪಡೆದುಕೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದರು ಎನ್ನುತ್ತಾರೆ. ಏನನ್ನು ಪರಿಶೀಲನೆ ಮಾಡದೇ ಕಣ್ಣು ಮುಚ್ಚಿಕೊಂಡು 9019292387 ನಂಬರ್ ನ್ನು ಬರೆಯಲಾಗಿದೆ ಎಂದರೆ ಸರಿಯಲ್ಲ.

**ಪ್ರಶ್ನೆಃ** ಪರಿಶೀಲನೆ ಎಂದರೆ ಏನು?

**ಉತ್ತರಃ** ನನ್ನ ಸಮಕ್ಷಮ ಸಿಮ್ ನ್ನು ಹಾಗೂ ಅದರ ಮೇಲೆ ಇರುವ ಜಿಯೋ ಎಂಬ ಶಬ್ದ ಹಾಗೂ ಅದರ ಮೇಲೆ ಇರುವ ಸಂಖ್ಯೆಗಳನ್ನು ಪರಿಶೀಲನೆ ಮಾಡಿದ್ದರು.

**ಪ್ರಶ್ನೆಃ** ನೀವು ಹೇಳುವ ಪರಿಶೀಲನೆಯಲ್ಲಿ 9019292387 ನಂಬರ್ ಕಂಡುಬಂದಿಲ್ಲ?

**ಉತ್ತರಃ** ಸಿಮ್ ಮೇಲೆ ಈ ಮೊಬೈಲ್ ನಂಬರ್ ಬರೆದಿರುವುದಿಲ್ಲ.

**ಪ್ರಶ್ನೆಃ** ಡುಪ್ಲಿಕೇಟ್ ಎಂದರೆ ಅದನ್ನು ತಿದ್ದಿ ಮಾಡಿರುವುದು?

**ಉತ್ತರಃ** ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ, ನಾನು

ಅರ್ಥೈಸಿಕೊಂಡಿರುವುದೇನೆಂದರೆ ಸಿಮ್ ಕಳೆದುಹೋದಾಗ ಅದರ ಪ್ರತಿಯನ್ನು ಪಡೆಯುವುದು.

**ಪ್ರಶ್ನೆಃ** ಪಂಚನಾಮೆಯಲ್ಲಿ ಡುಪ್ಲಿಕೇಟ್ ಕಾಪಿ ಎಂದು ಬರೆಯಲಾಗಿದೆ, ಅದು ನಿಮಗೆ ಗೊತ್ತೆ?

**ಉತ್ತರಃ** ನನಗೆ ಗೊತ್ತಿಲ್ಲ.

**ಪ್ರಶ್ನೆಃ** ಯಾವ ಕಾರಣಕ್ಕಾಗಿ ಡುಪ್ಲಿಕೇಟ್ ಕಾಪಿ ಎಂದು ಬರೆಯಲಾಗಿದೆ, ಅದು ನಿಮಗೆ ಗೊತ್ತೆ?

**ಉತ್ತರಃ** ನನಗೆ ಗೊತ್ತಿಲ್ಲ.

**ಪ್ರಶ್ನೆಃ** ಪಂಚನಾಮೆಯಲ್ಲಿ ಇನ್ಸ್ಟಗ್ರಾಮ ಮತ್ತು ವಾಟ್ಸಪ್ ಎಂದು ಬರೆಯಲಾಗಿದೆ ಎಂದರೆ?

**ಉತ್ತರಃ** ಹೌದು.

50. ನನ್ನ ಸಮಕ್ಷಮ ಆ ಸಿಮ್ ನಲ್ಲಿ ಇನ್ಸ್ಟಗ್ರಾಮ ಮತ್ತು ವಾಟ್ಸಪ್ ಬಗ್ಗೆ ಪರಿಶೀಲನೆ ಮಾಡಿಲ್ಲ. ಯಾಕೆ ಇನ್ಸ್ಟಗ್ರಾಮ್ ಮತ್ತು ವಾಟ್ಸಪ್ ಎಂದು ಮಹಜರ್ ನಲ್ಲಿ ಬರೆದಿರುತ್ತಾರೆ ಎಂದು ನನಗೆ ಗೊತ್ತು. ಅಲ್ಲಿ ನಾನು ಮೊಬೈಲ್ ಹ್ಯಾಂಡ್ ಸೆಟ್ ನೋಡಿರುವುದಿಲ್ಲ.

**ಪ್ರಶ್ನೆಃ** ಯಾರು, ಯಾವತ್ತು, ಎಲ್ಲಿ , ಏತಕ್ಕೋಸ್ಕರ, ಯಾರ ಹೇಳಿಕೆ ಮೆರೆಗೆ ಡುಪ್ಲಿಕೇಟ್ ಸಿಮ್ ಯಾರು ಪಡೆದಿದ್ದರು, ನಿಮಗೆ ಗೊತ್ತೆ?

**ಉತ್ತರಃ** ಸಹನಾರವರು ಸಿಮ್ ನ್ನು ಪಡೆದುಕೊಂಡಿದ್ದರು, ಆದರೆ ಯಾವಾಗ ಪಡೆದುಕೊಂಡಿದ್ದರು ಎಂದು ಗೊತ್ತಿಲ್ಲ.

51. ಯಾರ ಹೇಳಿಕೆ ಮೆರೆಗೆ ಸಹನಾರವರು ಸಿಮ್ ನ್ನು ಪಡೆದುಕೊಂಡಿದ್ದರು ಎಂದರೆ, ಸಾಕ್ಷಿ ಪೊಲೀಸರು ಬೇಕು ಎಂದು ಕೇಳಿದ್ದಕ್ಕೆ ಸಹನಾರವರು ಅಪ್ಳೈ ಮಾಡಿ ಪಡೆದುಕೊಂಡಿದ್ದರು ಎಂದು ನಮಗೆ ತಿಳಿಸಿದರು ಎನ್ನುತ್ತಾರೆ.

**ಪ್ರಶ್ನೆಃ** ಪೊಲೀಸರ ಆದೇಶದ ಮೆರೆಗೆ ಸಹನಾರವರು ಸಿಮ್ ಗೆ ಅರ್ಜಿ ಸಲ್ಲಿಸಿ ಪಡೆದುಕೊಂಡಿದ್ದರು ಎಂದು ಹೇಳಿದರೇ, ನೀವು ಏನು ಹೇಳುತ್ತೀರೀ?

**ಉತ್ತರಃ** ಹೌದು.

**ಪ್ರಶ್ನೆಃ** ಸುಳ್ಳು ಕೇಸು ಸೃಷ್ಟಿ ಮಾಡಲು ಸಹನಾ ಮೂಕಾಂತರ ಪೊಲೀಸರು ಡುಪ್ಲಿಕೇಟ್ ಸಿಮ್ ಕಾರ್ಡನ್ನು ಪಡೆದುಕೊಂಡಿರುತ್ತಾರೆ ಎಂದರೆ, ನೀವು ಏನು ಹೇಳುತ್ತೀರೀ?

**ಉತ್ತರಃ** ಸಹನಾರವರಿಂದ ಸಿಮ್ ನ್ನು ಪಡೆದುಕೊಂಡಿರುವುದು ನಿಜವಿರುತ್ತದೆ, ಆದರೆ ಅದು ಸುಳ್ಳು ಕೇಸೋ, ನಿಜ ಕೇಸೋ ಎಂದು ನನಗೆ ಗೊತ್ತಿಲ್ಲ.

52. 9019292387 ನಂಬರ್ ರೇಣುಕಾಸ್ವಾಮಿಗೆ ಸಂಬಂಧಪಟ್ಟ ಮೊಬೈಲ್ ಅಲ್ಲ ಹಾಗು ಅವರ ಮೊಬೈಲ್ ನಂಬರ್ ಬೇರೆ ಇತ್ತು ಎಂದರೆ, ಸಾಕ್ಷಿ ಅದು ರೇಣುಕಾಸ್ವಾಮಿಯವರ ಮೊಬೈಲ್ ನಂಬರೇ ಎನ್ನುತ್ತಾರೆ. ಈ ನಂಬರ್ ರೇಣುಕಾಸ್ವಾಮಿಯವರ ಮೊಬೈಲ್ ನಂಬರ್ ಅಲ್ಲ, ಅವರದ್ದು ಬೇರೆ ಮೊಬೈಲ್

ನಂಬರ್ ಇತ್ತು ಎಂದರೆ, ಸಾಕ್ಷಿ ಇದೇ ಅವರ ಮೊಬೈಲ್ ನಂಬರ್ ಇದ್ದು, ಬೇರೆ ನಂಬರ್ ಇದ್ದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

53. ಈ ಮೊಬೈಲ್ ನಂಬರ್ 9019292387 ಪೊಲೀಸರು ಸೃಷ್ಟಿ ಮಾಡಿದ ನಂಬರ್ ಎಂದರೆ, ಸಾಕ್ಷಿ ಅದು ರೇಣುಕಾಸ್ವಾಮಿಯವರ ನಂಬರ್ ಎನ್ನುತ್ತಾರೆ. 9019292387, ಈ ಮೊಬೈಲ್ ನಂಬರ್ ರೇಣುಕಾಸ್ವಾಮಿಯವರ ಮೊಬೈಲ್ ನಂಬರ್ ಎಂದು ಯಾವುದಾದರು ದಾಖಲೆಗಳನ್ನು ನೋಡಿರುತ್ತೀರ ಎಂದರೆ, ಸಾಕ್ಷಿ ಆ ದಿನ ಅವರ ಮನೆಯಲ್ಲಿ ಪರಿಶೀಲನೆ ಮಾಡಿದಾಗ ಈ ನಂಬರ್ ಗೊತ್ತಾಯಿತು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ರೇಣುಕಾಸ್ವಾಮಿಯವರ ಹೆಂಡತಿಯೇ ಈ ನಂಬರ್ ನ್ನು ಕೊಟ್ಟಿರುತ್ತಾರೆ ಎನ್ನುತ್ತಾರೆ.

54. ಪರಿಶೀಲನೆ ಮಾಡಿ ನಂಬರ್ ಗೊತ್ತಾಯಿತು ಎಂದು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತೀರುವುದು ಎಂದರೆ ಸರಿಯಲ್ಲ. ಮೊಬೈಲ್ ಪರಿಶೀಲನೆ ಮಾಡಿದ ಬಗ್ಗೆ ಮಹಜರ್ ನಲ್ಲಿ, ಎಲ್ಲೂ ನಮೂದು ಮಾಡಿಲ್ಲ ಎಂದರೆ, ಸಾಕ್ಷಿ ಮೊಬೈಲ್ ಪರಿಶೀಲನೆ ಮಾಡಿಲ್ಲ, ಸಿಮ್ ಮಾತ್ರ ಪರಿಶೀಲನೆ ಮಾಡಿದ್ದೇವೆ ಎನ್ನುತ್ತಾರೆ. ಸಿಮ್ ನ್ನು ಪರಿಶೀಲನೆ ಮಾಡಿ ಮೊಬೈಲ್ ನಂಬರ್ ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ, ಸಾಕ್ಷಿ ಆ ದಿನ ನಾವು ಸಿಮ್ ನ್ನು ಪರಿಶೀಲನೆ ಮಾಡಿರುವುದು ನಿಜ ಎಂದು ನುಡಿಯುತ್ತಾರೆ. ಸಿಮ್ ನ್ನು ನೀವು ಪರಿಶೀಲನೆ ಮಾಡಿದ್ದೀರಾ ಅಥವಾ ಪೊಲೀಸರು ಪರಿಶೀಲನೆ ಮಾಡಿದ್ದಾರಾ ಎಂದರೆ, ಸಾಕ್ಷಿ ನಾವು ಮಾಡಿದ್ದೆವು ಹಾಗೂ ಪೊಲೀಸರು ಮಾಡಿದ್ದರು ಎನ್ನುತ್ತಾರೆ.

55. ಮೊಬೈಲ್ ಹ್ಯಾಂಡ್ ಸೆಟ್ ಇಲ್ಲದೇ ಮೊಬೈಲ್ ನಂಬರ್ ನೋಡಲು ಬರುವುದಿಲ್ಲ ಎಂದರೆ ಸರಿ. ದಿಃ05.07.2024 ರಂದು ನಿಮ್ಮ ಹತ್ತಿರ ಮೊಬೈಲ್ ಇತ್ತ ಎಂದರೆ, ಸಾಕ್ಷಿ ಇತ್ತು ಎನ್ನುತ್ತಾರೆ.

**ಪ್ರಶ್ನೆಃ** ಆ ದಿನ ಬೆಳಗ್ಗೆ 8.00 ಗಂಟೆ ಯಿಂದ ಸಂಜೆ 6.00 ಗಂಟೆವರೆಗೆ ನಿಮ್ಮ ಮೊಬೈಲ್ ಟವರ್ ಲೊಕೇಷನ್ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ಹತ್ತಿರ ಇತ್ತು ಎಂದರೆ, ನೀವು ಏನು ಹೇಳುತ್ತೀರ?

**ಉತ್ತರಃ** ಸುಳ್ಳು.

56. ನಿ.ಪಿ.99 ಸಿಮ್ ನ್ನು ಈ ಕೇಸಿಗೋಸ್ಕರ ಸೃಷ್ಟಿಸಲಾಗಿದೆ ಎಂದರೆ ಸುಳ್ಳು. ಈ ಸಿಮ್ ಗೂ, ಈ ಮೊಬೈಲ್ ನಂಬರ್ ಗೂ, ರೇಣುಕಾಸ್ವಾಮಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ಮೃತರ ಹೆಂಡತಿಯೇ ಡುಪ್ಲಿಕೇಟ್ ಸಿಮ್ ನ್ನು ಪಡೆದುಕೊಂಡಿರುವುದಾಗಿ ನುಡಿಯುತ್ತಾರೆ. ಸಹನಾರವರು ಸಿಮ್‌ನ್ನು ಪೊಲೀಸರಿಗೆ ಕೊಡುವ ಉದ್ದೇಶದಿಂದಲೇ ಈ ಸಿಮ್ ನ್ನು ಪಡೆದಿದ್ದರೂ ಹಾಗೂ ಅವರು ಬಳಕೆ ಮಾಡುವುದಕ್ಕಾಗಿ ಅಲ್ಲ ಎಂದರೆ ಸಾಕ್ಷಿ ಈ ಕೇಸಿಗೋಸ್ಕರ ಬೇಕು ಎಂದು ಪೊಲೀಸರು ತಿಳಿಸಿದ್ದರು ಎಂದು ನುಡಿಯುತ್ತಾರೆ.

**ಪ್ರಶ್ನೆಃ** ಇನ್ಸ್ಟಗ್ರಾಮ್ ಮತ್ತು ವಾಟ್ಸಪ್ ಎಂದರೆ ಏನು?

**ಉತ್ತರಃ** ಅವು ಸಾಮಾಜಿಕ ಜಾಲತಾಣಗಳು.

**ಪ್ರಶ್ನೆಃ** ಸೋಷಿಯಲ್ ಮಿಡಿಯಾ ಎಂದರೆ, ಯಾರಾದರು ಅಪ್ ಲೋಡ್ ಮತ್ತು ಡೌನ್ ಲೋಡ್ ಮಾಡಬಹುದು ಮತ್ತು ನೋಡಬಹುದು ಎಂದರೆ?

**ಉತ್ತರಃ** ಮಾಡಬಹುದು, ಬಿಡಬಹುದು.

57. ಪೊಲೀಸರು ಇನ್ಸ್ಟಗ್ರಾಮ್ ಮತ್ತು ವಾಟ್ಸಪ್‌ನಲ್ಲಿ ಅಪ್ ಲೋಡ್ ಮಾಡುವ ಕಾರಣಕ್ಕೋಸ್ಕರ ಆ ಎರಡು ಹೆಸರುಗಳನ್ನು ಅಲ್ಲಿ ಬರೆದಿರುತ್ತಾರೆ ಎಂದರೆ, ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

**<u>ಪಾಟೀಸವಾಲುಃ 4, 6 ರಿಂದ 9, 13 ಮತ್ತು 15 ರಿಂದ 17 ನೇ ಆರೋಪಿ ಪರ ಶ್ರೀ. ಆರ್.ಆರ್. ವಕೀಲರಿಂದ:</u>**

58. ನಾನು Govt. Aided ಕಾಲೇಜಿನ ನಿವೃತ್ತ ಪ್ರಾಂಶುಪಾಲರಾಗಿದ್ದೇನೆ. ನಾನು ಅಕ್ಟೋಬರ್ 2023 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ರೇಣುಕಾಸ್ವಾಮಿ ನನಗೆ ಸುಮಾರು ವರ್ಷಗಳಿಂದ ಪರಿಚಯ ಎಂದು ನಾನು ಪೊಲೀಸರಿಗೆ ತಿಳಿಸಿರುವುದಿಲ್ಲ.

59. ದಿಃ05.07.2024 ರಂದು ಪೊಲೀಸರು ನನಗೆ ಕರೆ ಮಾಡಿದಾಗ ನಾನು ಮನೆಯಲ್ಲಿಯೇ ಇದ್ದೆ. ನನಗೆ ಪರಿಚಯ ಇದ್ದ ಕಾರಣವೇ, ಪೊಲೀಸರು ನನ್ನ ಫೋನ್ ನಂಬರ್ ನ್ನು ಹೊಂದಿ ನನಗೆ ಕರೆ ಮಾಡಿದ್ದರು ಎಂದರೆ, ಸಾಕ್ಷಿ ಇರಬಹುದು ಎನ್ನುತ್ತಾರೆ. ನನಗೆ ಪೊಲೀಸರ ಪರಿಚಯ ಇದ್ದ ಕಾರಣ ನನ್ನನು ಈ ಎರಡು ಪಂಚನಾಮೆಗೆ ಪಂಚರಾಗಿ ಆಯ್ಕೆ ಮಾಡಲಾಗಿತ್ತು ಎಂದರೆ, ಸಾಕ್ಷಿ ಹಾಗೇನು ಇಲ್ಲ ಎಂದು ನುಡಿಯುತ್ತಾರೆ.

60. ನಾನು ರೇಣುಕಾಸ್ವಾಮಿ ಕುಟುಂಬಸ್ಥರಿಗೆ ಪರಿಚಯಸ್ಥರಾದ ಕಾರಣದಿಂದ, ನನಗೆ ಪರಿಚಯ ಇದ್ದ ಪೊಲೀಸರು ನನ್ನನ್ನು ಈ ಎರಡು ಪಂಚನಾಮೆಗಳಿಗೆ ಕರೆದಿದ್ದರು ಎಂದರೆ, ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಯಾವುದೇ ಪಂಚನಾಮೆಗಳಿಗೆ ಪಾಲುಗೊಳ್ಳದೇ ಇದ್ದ ಕಾರಣ, ನನಗೆ ಈ ವಿಷಯ

ತಿಳಿದಿಲ್ಲ ಎಂದರೆ, ಸಾಕ್ಷಿ ನಾನು ಪಂಚನಾಮೆಗೆ ಪಾಲುಗೊಂಡಿದ್ದೇನೆ ಎನ್ನುತ್ತಾರೆ.

61. ರೇಣುಕಾಸ್ವಾಮಿಯ ಪ್ರಕರಣವನ್ನು ಹೊರತುಪಡಿಸಿ ಇನ್ನೊಂದು ಪ್ರಕರಣದಲ್ಲಿ ನೀವು ಪಂಚರಾಗಿದ್ದು, ಅದು ಯಾವ ಪಂಚನಾಮೆ ಎಂದು ಹೇಳಲು ಬರುತ್ತದೆಯೇ ಎಂದರೆ, ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಅದು ಯಾವ ಠಾಣೆಗೆ ಸಂಬಂಧಪಟ್ಟ ಪ್ರಕರಣ ಎಂದರೆ, ಸಾಕ್ಷಿ ಕಾಮಾಕ್ಷಿಪಾಳ್ಯ ಎನ್ನುತ್ತಾರೆ.

62. ದಿಃ05.07.2024 ರಂದು ನಾನು ಪಂಚನಾಮೆಗೆ ಹೋದಾಗ ಪೊಲೀಸರು ದಿಃ12.07.2024 ರಂದು ನಡೆಯುವ ಪಂಚನಾಮೆ ಬಗ್ಗೆ ತಿಳಿಸಿದ್ದರಾ ಎಂದರೆ, ಸಾಕ್ಷಿ ಮೊದಲು ಹೌದು ಎಂದು ನುಡಿದು, ನಂತರ ಸಾಕ್ಷಿ ನನಗೆ ಪ್ರಶ್ನೆ ಅರ್ಥ ಮಾಡಿಕೊಳ್ಳಲು ಸಮಯ ಬೇಕು ಎಂದು ಹೇಳಿ ದಿಃ05.07.2024 ರಂದು, ದಿಃ12.07.2024 ರ ಪಂಚನಾಮೆ ಕುರಿತು ಮಾಹಿತಿ ನೀಡಿರುವುದಿಲ್ಲ ಎನ್ನುತ್ತಾರೆ.

63. ನಾನು ಸಮಾಜ ಸೇವೆಯಲ್ಲಿ ತೊಡಗಿಕೊಂಡಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸಮಾಜ ಸೇವೆ ಮಾಡುವಾಗ ಕೆಲವೊಬ್ಬರಿಗೆ ಸಹಾಯ ಮಾಡಲು ಪೊಲೀಸ್ ಠಾಣೆಗೂ ಕೂಡ ಹೋಗಬೇಕಾಗಿರುತ್ತದೆ ಎಂದರೆ ಸರಿ. ಆ ರೀತಿ ಠಾಣೆಗೆ ಹೋದಾಗ ಪೊಲೀಸರೊಂದಿಗೆ ಒಡನಾಟ ಬೆಳೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

64. ದಿಃ05.07.2024 ರಂದು ನಿಮಗೆ ಕರೆ ಮಾಡಿದ ಪೊಲೀಸರೇ, ದಿಃ12.07.2024 ರಂದು ಕರೆ ಮಾಡಿದ್ದರಾ ಎಂದರೆ, ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿ.ಪಿ.107 ಮಹಜರ್ ನ್ನು ಯಾರು ಬೆರಳಚ್ಚು ಮಾಡಿದ್ದರು ಎಂದು ಅವರ ಹೆಸರು

ಹೇಳಲು ಬರುತ್ತದೆಯೇ ಎಂದರೆ, ಸಾಕ್ಷಿ ಕಾಮಾಕ್ಷಿಪಾಳ್ಯ ಪೊಲೀಸ್ ಸಿಬ್ಬಂದಿ ಮಾಡಿದ್ದು, ಅವರ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ನಾನು ನಿ.ಪಿ.107 ಪಂಚನಾಮೆಗೆ ಸಹಕರಿಸಿಲ್ಲ, ಆದ ಕಾರಣ ಅವರ ಹೆಸರು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಪಂಚನಾಮೆಯಲ್ಲಿ ಪಾಲುಗೊಂಡಿದ್ದೇನೆ, ಆದರೆ ಸದರಿ ಸಿಬ್ಬಂದಿಯವರ ಹೆಸರು ಈಗ ನಾನು ಮರೆತ್ತಿದ್ದೇನೆ ಎನ್ನುತ್ತಾರೆ.

65. ಎರಡೂ ಮಹಜರ್ ಗಳಿಗೆ ಪೊಲೀಸರು ನನಗೆ ರೇಣುಕಾಸ್ವಾಮಿಯವರ ಕುಟುಂಬಕ್ಕೆ ಪರಿಚಯಸ್ತನಾಗಿದ್ದ ಕಾರಣಕ್ಕೆ ನನಗೆ ಈ ಪಂಚನಾಮೆಗಳಿಗೆ ಸಹಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಈ ಎರಡು ಮಹಜರ್ ಗಳನ್ನು ಮಾಡಿರುವುದಿಲ್ಲ, ಹಾಗೂ ನಾನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಈ ಮಹಜರ್ ಗಳಿಗೆ ಸಹಿ ಮಾಡಿರುತ್ತೇನೆ ಎಂದರೆ, ಸಾಕ್ಷಿ ರೇಣುಕಾಸ್ವಾಮಿಯವರ ಮನೆಯಲ್ಲಿ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ನನ್ನ ಸಮಕ್ಷಮ ಈ ಮಹಜರ್ ಗಳ ಮೂಲಕ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

66. ನಾನು ಪೊಲೀಸರಿಗೂ ಮತ್ತು ರೇಣುಕಾಸ್ವಾಮಿಯವರ ಕುಟುಂಬಕ್ಕೆ ಪರಿಚಯಸ್ತನಾಗಿದ್ದ ಕಾರಣ, ಈ ಎರಡೂ ನಕಲಿ ಮಹಜರ್ ಗಳಿಗೆ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

67. 2 ನೇ ಆರೋಪಿ ಪರ ಮಾಡಿದ ಪಾಟಿಸವಾಲನ್ನೇ ತಮ್ಮ ಪರ ಮುಂದುವರೆದ ಪಾಟಿಸವಾಲಾಗಿ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.

**<u>ಪಾಟೀಸವಾಲುಃ 3 ನೇ ಆರೋಪಿ ಪರ ಶ್ರೀ.ಡಿ.ಎಸ್.ಎಸ್. ವಕೀಲರಿಂದ ಮತ್ತು 5 ನೇ ಆರೋಪಿ ಪರ ಶ್ರೀ. ಕೆ.ಎಂ.ಎಸ್, 10 ನೇ ಆರೋಪಿಯ ಪರ ಶ್ರೀ.ಟಿ.ಎಸ್ ವರಿಕೀಲರಿಂದ ಮತ್ತು 14 ನೇ ಆರೆಪೋಪಿ ಪರ ಶ್ರೀ. ಎಸ್.ಬಿ.ಪಿ.ಎಂ ವಕೀಲರಿಂದ:</u>**

3,5,10 ಮತ್ತು 14 ನೇ ಆರೋಪಿಗಳ ಪರ ವಕೀಲರು ಹಾಜರು ಇದ್ದು ಮೇಲೆ ಮಾಡಿದ ಪಾಟಿಸವಾಲುಗಳನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**<u>ಪಾಟೀಸವಾಲುಃ 11 ಮತುತ 12 ನೇ ಆರೋಪಿಗಳ ಪರ ವಕೀಲರಿಂದ:</u>**

11 ಮತ್ತು 12 ನೇ ಆರೋಪಿಗಳ ಪರ ವಕೀಲರು ಗೈರುಹಾಜರು ಇದ್ದು, 11 ಮತ್ತು 12 ನೇ ಆರೋಪಿಗಳು ವಿಸಿ ಮೂಲಕ ಹಾಜರು ಇದ್ದು, ಮೇಲೆ ಮಾಡಿದ ಪಾಟಿಸವಾಲುಗಳನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿರವರು ಸಾಕ್ಷಿಯನ್ನು ಬೇರೆ ಪ್ರಕರಣದಲ್ಲಿ ಸಾಕ್ಷಿಯಾಗಿ ಸಹಿ ಮಾಡಿದ ಬಗ್ಗೆ ಸಾಕ್ಷಿಯನ್ನು ಮರುವಿಚಾರಣೆ ಮಾಡಲು ಅನುಮತಿ ಕೋರುತ್ತಾರೆ.**

**ಶ್ರೀ.ಆರ್.ಆರ್. ವಕೀಲರು ಮತ್ತು ಹಿರಿಯ ವಕೀಲರಾದ ಶ್ರೀ.ಹೆಚ್.ಪಿ ರವರು ಸದರಿ ಪ್ರಶ್ನೆ ಮತ್ತು ಉತ್ತರದಲ್ಲಿ ಯಾವುದೇ ಗೊಂದಲ ಮತ್ತು ಉತ್ತರ ಇರದ ಕಾರಣ ಮರುವಿಚಾರಣೆ ಅನುಮತಿ ನೀಡಬಾರದು ಎಂದು ಕೋರಿಕೊಂಡಿರುತ್ತಾರೆ.**

**ಸದರಿ ಪ್ರಶ್ನೆ ಮತ್ತು ಉತ್ತರವನ್ನು ಗಮನಿಸಿದಾಗ, ಶ್ರೀ.ಆರ್.ಆರ್. ವಕೀಲರು ಸದರಿ ಸಾಕ್ಷಿಯ ರೂಡಿಗತ ಸಾಕ್ಷಿ ಎಂದು ರುಜುವಾತುಪಡಿಸಲು ಸದರಿ ಪ್ರಶ್ನೆಗಳನ್ನು ಕೇಳಲಾಗಿತ್ತು ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ.**

ಸದರಿ ಉತ್ತರ ಸಮರ್ಪಕವಾಗಿದ್ದರೆ ಸತ್ಯವನ್ನು ಕಂಡುಹಿಡಿಯಲು ನ್ಯಾಯಾಲಯಕ್ಕೆ ಅನುವಾಗುತಿರುವುದರಿಂದ, ಅದು ನ್ಯಾಯಾಲಯದ ಪ್ರಶ್ನೆ ಎಂದು ತಿರ್ಮಾನಿಸಿ, ಮಾನ್ಯ ವಿಶೇಷ ಪಿಪಿರವರ ಅನುಮತಿಯನ್ನು ತಿರಸ್ಕರಿಸಿ, ನ್ಯಾಯಾಲಯವೇ ಸದರಿ ಪ್ರಶ್ನೆಯನ್ನು ಸಾಕ್ಷಿಗೆ ಕಲಂ 165 ರ ಅಡಿಯಲ್ಲಿ ಕೇಳಲಾಯಿತು.

**ನ್ಯಾಯಾಲಯದ ಪ್ರಶ್ನೆಃ** ನೀವು ಬೇರೆ ಯಾವ ಪ್ರಕರಣದಲ್ಲಿ ಪಂಚರಾಗಿ ಸಹಕರಿಸಿರುತ್ತೀರಿ?

**ಉತ್ತರಃ** ಈ ಎರಡು ಪ್ರಕರಣಗಳಲ್ಲಿ ಹೊರತುಪಡಿಸಿ ಬೇರೆ ಯಾವುದೇ ಪ್ರಕರಣಗಳಲ್ಲಿ ಭಾಗಿಯಾಗಿರುವುದಿಲ್ಲ. ಸಾಕ್ಷಿ ಮುಂದುವರೆದು ದಿಃ05.07.2024 ಮತ್ತು 12.07.2024 ರಂದು ಮಾಡಿದ ಪಂಚನಾಮೆಗಳಲ್ಲಿ ಮಾತ್ರ ಭಾಗವಹಿಸಿದ್ದೇನೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**